ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 18-04-2017

# ಪತ್ರಿಕಾ ಆಮಂತ್ರಣ

1. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನವೀಕೃತ ಕೆನ್ಸಿಂಗ್‌ಟನ್ ಈಜುಕೊಳದ ಉದ್ಘಾಟನಾ ಸಮಾರಂಭ

ಉದ್ಘಾಟನೆ:

ಪ್ರಮೋದ್ ಮಧ್ವರಾಜ್,
ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಮೀನುಗಾರಿಕಾ ಸಚಿವರು.

ಜ್ಯೋತಿ ಬೆಳಗಿಸುವವರು:

ಕೆ.ಜೆ. ಜಾರ್ಜ್.
ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು.

ಅಧ್ಯಕ್ಷತೆ:

ಆರ್. ರೋಷನ್ ಬೇಗ್,
ನಗರಾಭಿವೃದ್ಧಿ ಹಾಗೂ ಹಜ್ ಸಚಿವರು

ದಿನಾಂಕ:19-04-2018, ಬುಧವಾರ, ಸಮಯ: ಬೆಳಿಗ್ಗೆ 10.00 ಗಂಟೆಗೆ.

ಸ್ಥಳ: "ಕೆನ್ಸಿಂಗ್‌ಟನ್ ಈಜುಕೊಳ" ಹಲಸೂರು, ಬೆಂಗಳೂರು

# ಮಾಧ್ಯಮದವರ ಗಮನಕ್ಕೆ

## ಮಾಧ್ಯಮ ವರದಿಗಾರರಿಗೆ ಹವಾಮಾನ ಸಂಬಂಧಿತ ವಿಕೋಪಗಳ ಕುರಿತು ಕಾರ್ಯಾಗಾರ

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕರ್ನಾಟಕ ರಾಜ್ಯದ ಮಾಧ್ಯಮ ವರದಿಗಾರರಿಗೆ ಹವಾಮಾನ ಸಂಬಂಧಿತ ವಿಕೋಪಗಳ ಕುರಿತು ಮಾಹಿತಿ ಹಾಗೂ ಸಲಹೆಗಳ ಬಗ್ಗೆ ತಾಂತ್ರಿಕ ಮಾಹಿತಿ ಒದಗಿಸಲು ಏಪ್ರಿಲ್ 22 ರಂದು ಬೆಳಿಗ್ಗೆ 10.30 ಗಂಟೆಗೆ ಅರ್ಧ ದಿನದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ.

ಇತ್ತೀಚಿನ ದಿನಗಳಲ್ಲಿ ಹವಾಮಾನದಲ್ಲಿ ಹಲವಾರು ವೈಪರೀತ್ಯಗಳುಂಟಾಗುತ್ತಿದ್ದು ಅದರಿಂದಾಗಿ ಸಾಮಾನ್ಯ ಜನಜೀವನದ ಮೇಲೆ ತೀವ್ರತರ ಪರಿಣಾಮಗಳಾಗುತ್ತಿರುವುದು ಕಂಡುಬಂದಿದೆ. ಈ ರೀತಿಯ ಹವಾಮಾನ ಸಂಬಂಧಿತ ವಿಕೋಪಗಳಿಂದಾಗುವ ಪರಿಣಾಮಗಳನ್ನು ತಗ್ಗಿಸಲು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ನೈಸರ್ಗಿಕ ವಿಕೋಪಗಳ ಕುರಿತು ವೈಜ್ಞಾನಿಕ ಮಾಹಿತಿ ಮತ್ತು ಸಲಹೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕಾರ್ಯವನ್ನು ಮಾಧ್ಯಮಗಳು ಈಗಾಗಲೇ ಕೈಗೊಂಡಿದೆ. ಈ ಕಾರ್ಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ಮಾಧ್ಯಮ ವರದಿಗಾರರುಗಳಿಗೆ ಇನ್ನಷ್ಟು ನಿಖರ ಮಾಹಿತಿ ಅಗತ್ಯವಿರುವುದು ಕಂಡುಬಂದಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ, ಭಾರತ ಸರ್ಕಾರವೂ ನೈಸರ್ಗಿಕ ವಿಕೋಪಗಳ ಕುರಿತು ಮಾಧ್ಯಮ ವರದಿಗಾರರುಗಳಿಗೆ ತಾಂತ್ರಿಕ ಮಾಹಿತಿಯನ್ನೊದಗಿಸಲು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ನೆರವಾಗಲು ಅಗತ್ಯವಿರುವ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲು ಸಲಹೆ ನೀಡಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕರ್ನಾಟಕ ಸರ್ಕಾರ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ನೊಂದಾಯಿತ ಸ್ವಾಯತ್ತ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಸಂಭವನೀಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಜವಾಬ್ದಾರಿಯನ್ನು ಹೊಂದಿದೆ. ಈ ಕೇಂದ್ರವು ರಾಜ್ಯದ ಎಲ್ಲಾ 6000 ಗ್ರಾಮ ಪಂಚಾಯಿತಿಗಳಲ್ಲಿ ದೂರಸ್ಥ ಮಳೆಮಾಪನ ಕೇಂದ್ರಗಳು ಹಾಗೂ ಎಲ್ಲಾ 747 ಹೋಬಳಿ ಕೇಂದ್ರಗಳಲ್ಲಿ ದೂರಸ್ಥ ಹವಾಮಾನ ಮಾಪನ ಕೇಂದ್ರಗಳನ್ನು ಸ್ಥಾಪಿಸಿ ಹವಾಮಾನ ಮುನ್ಸೂಚನೆಯನ್ನೂ ನೀಡುತ್ತಿದೆ. ಈ ಎಲ್ಲಾ ಮಾಹಿತಿ, ಮುನ್ಸೂಚನೆ ಹಾಗೂ ಸಲಹೆಗಳನ್ನು ಜನಸಾಮಾನ್ಯರಿಗೆ ಸಕಾಲದಲ್ಲಿ ತಲುಪಿಸಲು ಹಲವು ಕ್ರಮ ಕೈಗೊಂಡಿದೆ.

ಹೆಚ್ಚಿನ ಮಾಹಿತಿಗಾಗಿ ಡಾ. ಸಿ. ಎನ್. ಪ್ರಭು, ಅವರನ್ನು ಮೊಬೈಲ್ ಸಂಖ್ಯೆ 8762171751 ಮೂಲಕ ಸಂಪರ್ಕಿಸಬಹುದುದಾಗಿದೆ ಈ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು 50 ವರದಿಗಾರರಿಗೆ ಮಾತ್ರ ಅವಕಾಶವಿದ್ದು, ನೊಂದಣಿ ಮಾಡಿಕೊಳ್ಳಲು ಇಮೇಲ್ dmc.kar@gmail.com ಗೆ ಮೇಲ್ ಮಾಡಬಹುದಾಗಿದೆ.

## ಪತ್ರಿಕಾ ಪ್ರಕಟಣೆ

## “ಹವಾಮಾನ ಮಾಹಿತಿ ಸಂವಹನೆ – ಮಾಧ್ಯಮದ ಪಾತ್ರ” ಕಾರ್ಯಾಗಾರ

ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಸಹಯೋಗದೊಂದಿಗೆ **“ಹವಾಮಾನ ಮಾಹಿತಿ ಸಂವಹನೆ – ಮಾಧ್ಯಮದ ಪಾತ್ರ” ಕುರಿತು ಕಾರ್ಯಾಗಾರ”** ವನ್ನು ಏಪ್ರಿಲ್ 22 ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ನಗರದ ಯಲಹಂಕದ ಕೆ.ಎಸ್.ಎನ್.ಡಿ.ಎಂ.ಸಿ. ಸಭಾಂಗಣ, ಮೇಜರ್ ಉನ್ನಿಕೃಷ್ಣನ್ ರಸ್ತೆ, ಬೆಂಗಳೂರು – 560 064 ಇಲ್ಲಿ ಹಮ್ಮಿಕೊಂಡಿದೆ.

**ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತ ಟಿ.ಎಂ. ವಿಜಯಭಾಸ್ಕರ್ ಅವರು ಕಾರ್ಯಾಗಾರದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.**

**ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ಗಂಗಾರಾಂ ಬಡೇರಿಯಾ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.**

**ಎಂಆರ್‌ಎಂ:ಜಿಪಿಆರ್.**

## ವಿಮಲಾಗೌಡ ನಿಧನಕ್ಕೆ
## ವಿಧಾನ ಪರಿಷತ್ ಸಭಾಪತಿ ತೀವ್ರ ಸಂತಾಪ

ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಪರಿಷತ್ತಿನ ಉಪ ಸಭಾಪತಿಗಳು ಮತ್ತು ಹಾಲಿ ಸದಸ್ಯರೂ ಆದ ಶ್ರೀಮತಿ ವಿಮಲಾಗೌಡ ಅವರ ನಿಧನಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಡಿ. ಹೆಚ್. ಶಂಕರಮೂರ್ತಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

“ಶ್ರೀಮತಿ ವಿಮಲಾಗೌಡ ಮತ್ತು ನಾನು ಕಳೆದ 35 ವರ್ಷಗಳಿಗೂ ಹೆಚ್ಚು ಕಾಲ ರಾಜಕೀಯ ಕ್ಷೇತ್ರದಲ್ಲಿ ಒಡನಾಡಿಗಳಾಗಿದ್ದೆವು. ವಿಧಾನ ಪರಿಷತ್‌ನಲ್ಲಿ ಯಾವುದೇ

ವಿಷಯದ ಬಗೆಗೂ ಅಧ್ಯಯನ ಮಾಡಿಕೊಂಡು ಬಂದು ಗಟ್ಟಿದನಿಯಲ್ಲಿ ಸಮರ್ಥವಾಗಿ ಮಾತನಾಡಿ ಸರ್ಕಾರದ ವೈಫಲ್ಯವನ್ನು ತೆರೆದಿಡುತ್ತಿದ್ದರು."

ಇವರ ನಿಧನದಿಂದ ಒಬ್ಬ ಉತ್ತಮ ಸಂಸದೀಯ ಪಟುವನ್ನು ಕಳೆದುಕೊಂಡಂತಾಗಿದೆ. ಇವರ ಅಗಲಿಕೆಯಿಂದ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

**ಎಂಆರ್‌ಎಂ:ಜಿಪಿಆರ್.**

## ವಿಮಲಾಗೌಡ ನಿಧನಕ್ಕೆ
## ವಿಧಾನ ಪರಿಷತ್ ಉಪ ಸಭಾಪತಿ ತೀವ್ರ ಶೋಕ

ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಪರಿಷತ್ತಿನ ಉಪ ಸಭಾಪತಿಗಳು ಮತ್ತು ಹಾಲಿ ಸದಸ್ಯರೂ ಆದ ಶ್ರೀಮತಿ ವಿಮಲಗೌಡ ಅವರ ನಿಧನಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಉಪ ಸಭಾಪತಿ ಮರಿತಿಬ್ಬೇಗೌಡ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಶ್ರೀಮತಿ ವಿಮಲಾಗೌಡ ಅವರು ಅಪರೂಪದ ರಾಜಕಾರಣಿಯಾಗಿದ್ದರು. ಇವರ ಅಗಲಿಕೆಯಿಂದ ರಾಜ್ಯ ರಾಜಕಾರಣದಲ್ಲಿ ಮುತ್ಸದ್ದಿ ಜನನಾಯಕಿ ಹಾಗೂ ಒಬ್ಬ ಉತ್ತಮ ಸಂಸದೀಯ ಪಟುವನ್ನು ಕಳೆದುಕೊಂಡಂತಾಗಿದೆ.

ಇವರ ಅಗಲಿಕೆಯಿಂದ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಅವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

**ಎಂಆರ್‌ಎಂ:ಜಿಪಿಆರ್.**

## ಪರೀಕ್ಷೆಯಿಂದ ಡಿಬಾರ್

ಬೆಂಗಳೂರು, ಏಪ್ರಿಲ್ 18 (ಕರ್ನಾಟಕ ವಾರ್ತೆ)

ಏಪ್ರಿಲ್ 16 ರಂದು ಬೆಂಗಳೂರು ಪರೀಕ್ಷಾ ಕೇಂದ್ರದ ಉಪ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾದ 2017 ನೇ ಸಾಲಿನ ಪ್ರಥಮ ಅಧಿವೇಶನ ಅಕೌಂಟ್ಸ್ ಹೈಯರ್ ವಿಷಯದ ಪತ್ರಿಕೆ –2ರ (ಅಪರಾಹ್ನ) ಇಲಾಖಾ ಪರೀಕ್ಷೆಯ ಸಮಯದಲ್ಲಿ ನಕಲು ಮಾಡುತ್ತಿದ್ದ ಒಂಬತ್ತು ಅಭ್ಯರ್ಥಿಗಳನ್ನು ಮುಂದಿನ ವಿಚಾರಣಾ ನಡವಳಿಗಳನ್ನು ಬಾಕಿ ಇಟ್ಟಂತೆ ಪ್ರಸಕ್ತ ಅಧಿವೇಶನ ಮತ್ತು ಮುಂದೆ ನಡೆಯುವ 2017 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯಿಂದ ಡಿಬಾರ್ ಮಾಡಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.